MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - SATURDAY 1-4-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಾರ್ಚ್ 2023 ಮಲೇಶಿಯನ್ ಪಾಮೆಣ್ಣೆ ರಫ್ತು 24% ಹೆಚ್ಚಳ

ಮಾರ್ಚ್ 2023 ಮಲೇಶಿಯನ್ ಪಾಮೆಣ್ಣೆ ರಫ್ತು ಫೆಬ್ರವರಿಯಲ್ಲಿದ್ದ 11,59,720 ಟನ್‌ಗಳಿಂದ 24% ಹೆಚ್ಚಳ ವಾಗಿ 14,38,074 ಟನ್‌ಗಳಾಗಿವೆಯೆಂದು ITS ಹೇಳಿದೆ.

## ರಾಬಿ ಬೆಳೆಯ 3 ಲಕ್ಷ ಟನ್ ನೀರುಳ್ಳಿ ಸರಕಾರಿ ಏಜೆನ್ಸಿಗಳಿಂದ ಖರೀದಿ

ಸರಕಾರಿ ಏಜೆನ್ಸಿಗಳು 2023 ರಾಬಿ ಬೆಳೆಯ 3 ಲಕ್ಷ ಟನ್ ನೀರುಳ್ಳಿ ಖರೀದಿ ಮಾಡಲಿವೆಯೆಂದು ನಾಗರಿಕ(ಬಳಕೆದಾರ) ವ್ಯವಹಾರ, ಆಹಾರ ಸಾರ್ವಜನಿಕ ಹಂಚಿಕೆ ವಿಭಾಗದ ಕೇಂದ್ರ ಮಂತ್ರಿ ಪೀಯೂಷ್ ಗೋಯಲ್ ಹೇಳಿದ್ದಾರೆನ್ನಲಾಗಿದೆ. ಹಿಂದಿನ ವರ್ಷ ರಾಬಿ ಬೆಳೆಯಿಂದ 2.5 ಲಕ್ಷ ಟನ್ ನೀರುಳ್ಳಿ ಸರ್ಕಾರಿ ಏಜೆನ್ಸಿಗಳು ಖರೀದಿಸಿವೆಯೆನ್ನಲಾಗಿದೆ.

## ಹಿಂದಿನ 5 ವರ್ಷಗಳಲ್ಲಿ ಭಾರತದಿಂದ ಮೆಣಸಿನಕಾಯಿ ರಫ್ತು 25 ಶೇಕಡಾ ಹೆಚ್ಚಳ

2017–18 ರಲ್ಲಿ 4.43 ಲಕ್ಷ ಟನ್‌ಗಳಾಗಿದ್ದ ಭಾರತದ ಮೆಣಸಿನಕಾಇ ರಫ್ತು 2021–22 ರಲ್ಲಿ 25 ಶೇಕಡಾ ಹೆಚ್ಚಳವಾಗಿ 5.57 ಲಕ್ಷ ಟನ್‌ಗಳಾಗಿವೆಯೆಂದು ಲೋಕಸಭೆಯಲ್ಲಿ ಲಿಖಿತ ಉತ್ತರದ ಮೂಲಕ ಕೇಂದ್ರ ಸರಕಾರದ ರಾಜ್ಯ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿ ಅನುಪ್ರಿಯ ಪಟೇಲ್ ತಿಳಿಸಿದ್ದಾರೆನ್ನಲಾಗಿದೆ. ಅದೇ ವೇಳೆ ಉತ್ಪಾದನೆ 7.33 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ.

## ಆವಕ ಇಳಿಕೆಯಿಂದ ಮಧ್ಯಪ್ರದೇಶದ ಬೇಳೆಕಾಳು ಮಿಲ್‌ಗಳ ಉತ್ಪಾದನೆ 20 ಶೇಕಡಾ ಇಳಿಕೆ

ತೀವ್ರ ದರ ಹೆಚ್ಚಳ ಹಾಗೂ ಆವಕ ಇಳಿಕೆಯಿಂದ ಮಧ್ಯಪ್ರದೇಶದಲ್ಲಿ ಬೇಳೆಕಾಳು ಮಿಲ್‌ಗಳಲ್ಲಿ ಬೇಳೆಕಾಳು ಉತ್ಪಾದನೆ ಸಾಮರ್ಥ್ಯ 20 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಸ್ಥಳೀಯ ಮಾರುಕಟ್ಟೆಗಳಿಗೆ ತೊಗರಿ, ಉದ್ದು, ಕಡ್ಲೆಗಳ ದಿನವಹಿ ಆವಕ ಇಳಿಕೆಯಿಂದ ಹಾಗೂ ಉತ್ಪಾದನೆ ಇಳಿಕೆಯಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಮಿಲ್‌ಗಳಿಗೆ ಬೇಳೆಕಾಳುಗಳ ಆವಕ ಇಳಿಕೆಯಾಗಿ ಉತ್ಪಾದನೆ ಇಳಿಕೆಯಾಗಿದೆಯೆನ್ನಲಾಗಿದೆ ಹಾಗೂ ದರಗಳು 30 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ಸಾಗಾಣಿಕಾ ಮತ್ತಿತರ ವೆಚ್ಚ ಹೆಚ್ಚಳದಿಂದ ಮಧ್ಯಪ್ರದೇಶದಲ್ಲಿ ಬೇಳೆಗಳು ಉತ್ಪಾದನಾ ವೆಚ್ಚ ಇತರ ನೆರೆಯ ರಾಜ್ಯಗಳಿಂದ 15 ಶೇಕಡಾ ಹೆಚ್ಚಳವಿದೆಯೆನ್ನಲಾಗಿದೆ.

## ಉತ್ತರಭಾರತದ ರಾಜ್ಯಗಳಲ್ಲಿ ಅಕಾಲಿಕ ಮಳೆ, ಬೆಳೆ ಹಾನಿ

ಉತ್ತರಭಾರತದ ರಾಜ್ಯಗಳಾದ ಪಂಜಾಬ್, ಹರಿಯಾಣ, ಉತ್ತರಪ್ರದೇಶ, ರಾಜಸ್ಥಾನ ಮತ್ತು ಮಧ್ಯಪ್ರದೇಶಗಳಲ್ಲಿನ ಅಕಾಲಿಕ ಮಳೆಯಿಂದ ಕಟಾವಿಗೆ ತಯಾರಾಗಿರುವ ಗೋಧಿ, ಕಡ್ಲೆ ಹಾಗೂ ಸಾಸಿವೆ ಬೆಳೆಗಳಿಗೆ ಹಾನಿಯಾಗುತ್ತಿದೆಯೆನ್ನಲಾಗಿದೆ. ಆಂಧ್ರಪ್ರದೇಶದಲ್ಲಿ ಜೋಳ, ಮೆಣಸಿನಕಾಯಿ, ಭತ್ತ ಮುಂತಾದ ಬೆಳೆಗಳಿಗೆ ಹಾನಿಯಾಗುತ್ತಿದೆಯೆನ್ನಲಾಗಿದೆ. ಹಾನಿಯ ನಿಖರ ಪ್ರಮಾಣ ಅಂದಾಜಿಸಲಾಗಿಲ್ಲವಾದರೂ, ಒಟ್ಟು ಉತ್ಪಾದನೆಗೆ ಹೆಚ್ಚಿನ ಪ್ರಭಾವ ಬೀರಲಾರದೆನ್ನಲಾಗಿದೆ.